


**ಗಂಭೀರ ಚಿಂತನೆ**
'ಸಿನಿಮಾ ಪಾಲಿಟಿಕ್ಸ್', ರಘುನಾಥ ಚ.ಹ. ಅವರ ಮುಖಪುಟ ಲೇಖನ ಗಂಭೀರ ಚಿಂತನೆಗೆ ಅವಕಾಶ ನೀಡಿತು. ಎಂ.ಜಿ.ಆರ್.,ಎನ್.ಟಿ.ಆರ್. ಹಾಗೂ ಜಯಲಲಿತಾ ಸಿನಿಮಾವನ್ನು ಏಣಿಯಾಗಿ ಬಳಸಿ, ರಾಜಕೀಯದಲ್ಲಿ ಉತ್ತುಂಗಕ್ಕೇರಿದರು. ಕೊನೆಯವರೆಗೂ ತಮ್ಮ ಜನಪ್ರಿಯ ಕಾರ್ಯಗಳು ಹಾಗೂ ಜನರೊಡನೆ ಬೆರೆಯುವುದರಿಂದ ವರ್ಚಸ್ಸನ್ನು ಉಳಿಸಿ ಕೊಂಡಿದ್ದರು. ಕನ್ನಡದ ಕಲಿಗಳು ಅಧಿಕಾರ ಸಿಕ್ಕ ಬಳಿಕ ಜನರಿಂದ ದೂರ ಉಳಿಯುವುದು, ಅವಕಾಶವನ್ನು ಕಳೆದುಕೊಳ್ಳುವುದು ಮುಂತಾಗಿ ಮಾಡುತ್ತಿದ್ದಾರೆ. ಮುಂದಾದರೂ ಏರಿದ ಏಣಿಯನ್ನು ಮರೆಯದೆ ಜನಪ್ರಿಯ ಕಾರ್ಯಕ್ರಮಗಳು ಹಾಗೂ ಸಜ್ಜನಿಕೆಯಿಂದ ಜನರ ಪ್ರೀತಿ ಗಳಿಸಿ ಉಳಿಸಿಕೊಳ್ಳಲಿ.

—ಡಾ. ಕೆ.ಕೆ. ಜಯಚಂದ್ರ ಗುಪ್ತ ಹಾಸನ,
ಮಧುರಾ ಸುಬ್ರಹ್ಮಣ್ಯ ಬೆಂಗಳೂರು,
ಮೀನಾಕ್ಷಿ ಕೆ.ರಾಮಗುಂಡಿ ಬೈಲಹೊಂಗಲ

**ವಿಚಾರಲಹರಿ**
'ವಿಚಾರಲಹರಿ'ಯಲ್ಲಿ (ತೋಷ) ವಿಮರ್ಶಕ ಕುರಿತ ಬರಹ ಅರ್ಥಪೂರ್ಣ. ವಿಮರ್ಶೆ ಎಂದರೆ ಚರ್ಚೆ ಮಾಡುವುದು ಅಥವಾ ಅದರ ಆಳ ತಿಳಿದುಕೊಳ್ಳುವುದು ಎಂದು ತಿಳಿದುಕೊಂಡಿದ್ದೆವು. ವಿಮರ್ಶೆ ಎಂದರೆ ಕೈಯಿಂದ ಮುಟ್ಟುವುದು ಎಂಬುದನ್ನು ಲೇಖಕರು ಚೆನ್ನಾಗಿ ತಿಳಿಸಿದ್ದಾರೆ.

—ರುಕ್ಮಿಣಿ ಕೃ. ದೇಶಪಾಂಡೆ, ಗೋಕಾಕ

**ಸಮಗ್ರ ಚಿತ್ರಣ**
'ನಿರ್ಮೊಡನೆ'ಯಲ್ಲಿ 'ನಕಲಿ ಔಷಧಗಳನ್ನು ನಿಯಂತ್ರಿಸಿ' (ಬಿ.ಎಂ. ಹನೀಫ್) ಬರಹ ಔಷಧ ಸಮಸ್ಯೆಯ ಸಮಗ್ರ ಚಿತ್ರಣ ನೀಡಿದೆ. ಔಷಧಗಳ ಗುಣಮಟ್ಟ ಕಳಪೆ ಎಂಬ ಅರಿವಿದ್ದರೂ ಸಂಬಂಧಪಟ್ಟ ಔಷಧ ತಯಾರಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಏಕೆ ಮೀನ ಮೇಷ ಎಣಿಸುತ್ತಿದೆ ಎಂಬುದೇ ಅರ್ಥವಾಗುತ್ತಿಲ್ಲ.

—ಸುಂದರ್, ಶ್ರೀನಾಥ್ ಕೊನೇಟಿ ಬೆಂಗಳೂರು

**ಇಂದಿರಾಗೆ ಇಂದಿರಾ ಆರತಿ!**
'ಸವಿ ಸವಿ ನೆನಪು' ಅಂಕಣದಲ್ಲಿ 'ಇಂದಿರಾ ಗಾಂಧಿಗೆ ಆರತಿ ಎತ್ತಿದಾಗ' (ಎಚ್.ಎಸ್. ಇಂದಿರಾ) ಅವರ ಸಿಹಿನೆನಪನ್ನು ಓದಿ ಪುಳಕವಾಯಿತು. ಇಂದಿರಾ ಗಾಂಧಿ ಅವರ ಆಕರ್ಷಕ ವ್ಯಕ್ತಿತ್ವ ಕಣ್ಮುಂದೆ ಬಂತು!

—ಎಸ್. ಚನ್ನಪ್ಪ ಮೈಸೂರು

**ರುಚಿ ನೋಡುವ ಬಯಕೆ**
'ವಿಚಿತ್ರ ಜಲಸಸ್ಯ ಸಿಂಗಾಡ್' ಬರಹ (ಹೇಮಲತಾ ಬಿ.) ಸಾಕಷ್ಟು ಮಾಹಿತಿ ನೀಡಿದೆ. ಸಿಂಗಾಡ್ ಎಂಬುದು ಎಳನೀರು ರುಚಿಯದ್ದು ಇರಬಹುದು. ಹಾಗಾಗಿ ಹಲವು ರೋಗ ನಿವಾರಕ ಇರಬಹುದು. ಇದೇ ಏಪ್ರಿಲ್‌ನಲ್ಲಿ ಕಾಶಿ, ನೇಪಾಳ ಕಡೆಗೆ ಪ್ರವಾಸ ಹೊರಟಿದ್ದೇವೆ. ಆಗ ಈ 'ಸಿಂಗಾಡ್'ನ ರುಚಿ ನೋಡುವ ಬಯಕೆ ಉಂಟಾಗಿದೆ.

—ನಾರಾಯಣ ಯಾಜಿ ಶಿರಾಲಿ

**ಬ್ರೆಜಿಲ್ ಜೋಡಿ**
'ಎಲ್ಲಿಂದಲೋ ಬಂದವರು' ಅಂಕಣದಲ್ಲಿ (ಸುಮಾ ಬಿ.) 'ಸೈಕಲ್‌ಪ್ರಿಯ ಬ್ರೆಜಿಲ್ ಜೋಡಿ' ಕುರಿತು ಓದಿ ಖುಷಿಯಾಯಿತು. ಭಾರತದಲ್ಲಿ ಸಂಚಾರಿ ಕಾನೂನು ಉಲ್ಲಂಘನೆ ನೋಡಿ ಈ ಬ್ರೆಜಿಲ್ ಜೋಡಿ ಬೆಚ್ಚಿ ಬಿದ್ದಿದ್ದಾರೆ. ಅಲ್ಲಿ ಸಂಚಾರ ವ್ಯವಸ್ಥೆ ಸುಗಮವಾಗಿ ನಡೆಯುತ್ತಿರುವುದೇ ಇದಕ್ಕೆ ಕಾರಣ ಇರಬಹುದು.

—ಕೋಟೇಶ್ವರ ಸೂರ್ಯನಾರಾಯಣ
ರಾವ್, ಬೆಂಗಳೂರು

**ಪ್ರವಾಸ ಲೇಖನ**
ಪ್ರವಾಸ ಪುಟದಲ್ಲಿ 'ಕರ್ನಾಟಕದ ಕಾಶ್ಮೀರದಲ್ಲಿ' (ರಾಘವೇಂದ್ರ ತೊಗರ್ಸಿ) ಲೇಖನ ಕೊಡಗಿನ ಕುರಿತಾದ, ಅದರಲ್ಲೂ ಸುಂದರ ಪ್ರವಾಸಿ ತಾಣಗಳ ಬಗ್ಗೆ ಉಪಯುಕ್ತ ಮಾಹಿತಿ ನೀಡಿತು. ಮನಮೋಹಕ ಛಾಯಾಚಿತ್ರಗಳು ವಿಸ್ಮಯಗೊಳಿಸಿದವು.

—ಬಾಳ್ಳುಪೇಟೆ ನೀಲಕಂಠಪ್ಪ ಹಾಸನ,
ಪಿ.ಜಯವಂತ ಪೈ ಕುಂದಾಪುರ

**ಕಥೆ ಚೆನ್ನಾಗಿದೆ**
ಕಥೆ 'ಹುಚ್ಚು' (ಪದ್ಮಲತಾ ಟಿ.) ಚೆನ್ನಾಗಿದೆ. ಯಶಸ್ವಿ ದಾಂಪತ್ಯ ಜೀವನದ ಹಿಂದೆ ಚಿಕ್ಕೆಯಂಥವರಿದ್ದರೆ ನಮ್ಮ ಜನ ಹುಚ್ಚಿ ಅಂತಾರೆ. ಅವಳ ತ್ಯಾಗದ ಬದುಕಿನ ಬಗ್ಗೆ ಗಂಡನಿಗೆ ಅರಿವಿರಬೇಕಿತ್ತು.

—ರಾಜಶೇಖರ ಹಾದಿಮನಿ ಧಾರವಾಡ,
ನೇ.ಗೋ.ಬ. ಕುಕ್ಕೆಸುಬ್ರಹ್ಮಣ್ಯ,
ಕೊಹಿಮ ಬಸರಕೋಡು

'ಒಂದು ಮುಳ್ಳಿನ ಕಥೆ' (ಡಾ. ಅಂಬವ್ವಾ ಚಿಕಾಲಗುಡ್ಡ) ಮಿನಿಕಥೆ ಅರ್ಥಪೂರ್ಣವಾಗಿದೆ.

—ಉಷಾ ಸೋಗಲ್ ಬೆಂಗಳೂರು

**ಮಕ್ಕಳ ಕವಿತೆ**
ಮಕ್ಕಳ ಕವಿತೆ 'ಗುಬ್ಬಕ್ಕನಿಗೆ ಮಂಗಣ್ಣ ನೆರವು' (ಸೋಮಲಿಂಗ ಬೇಡರ) ಚೆನ್ನಾಗಿದೆ. ಗುಬ್ಬಕ್ಕನ ಮಕ್ಕಳನ್ನು ಅಪಾಯದಿಂದ ರಕ್ಷಿಸಿದ ಮಂಗಣ್ಣನ ಸಮಯಪ್ರಜ್ಞೆ ಮೆಚ್ಚುವಂತಹದು.

—ರವೀಂದ್ರನಾಥ ಶಿ. ಯಡಹಳ್ಳಿ ಬೀಳಗಿ

**ಸ್ಟೀರಾಯ್ಡ್ ಲೇಖನ**
ಆರೋಗ್ಯ ಪುಟದಲ್ಲಿ 'ಸ್ಟೀರಾಯ್ಡ್ ಎಂಬ ಎರಡು ಅಲಗಿನ ಕತ್ತಿ' ಬರಹದಿಂದ (ಡಾ. ಮುರಲೀ ಮೋಹನ ಚೂಂತಾರು) ಸ್ಟೀರಾಯ್ಡ್ ಬಳಕೆಯಿಂದ ರೋಗಿಗಳಿಗೆ ಆಗುವ ಉಪಯೋಗಗಳು ಮತ್ತು ಅದನ್ನು ಅತಿಯಾಗಿ ಬಳಸುವುದರಿಂದ ರೋಗಿಯ ಮೇಲೆ ಆಗುವ ದುಷ್ಪರಿಣಾಮಗಳ ಬಗ್ಗೆ ಸಮಗ್ರ ಮಾಹಿತಿ ಸಿಕ್ಕಿದಂತಾಗಿದೆ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

